ಮೈಸೂರ ಗೆಜಿಟ್.

ನಂ. 38] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 45.

ಬೆಂಗಳೂರು, ಗುರುವಾರ, ನವಂಬರ್ ತಾ॥ 19, ಸ್ ೧೯೦೩.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಲ್ಲ್ ಜಡ್ಜ್‌ರು ಮಗೈರೇರಿಂದ ಕೊಡೋಕಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.
ನೋಟಿಫಿಕೇರ್ಷ.

ತಾರೀಖು 8ನೆ ನವಂಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಗವರ್ನ್‌ಮೆಂಟ್ ಪ್ರೊಸಿಡಿಂಗ್ಸ್ 17-8-1903ನೆ ಮು[redacted]185—2560ನೆ ನಂಬರ್ ಅನುಸರಿಸಿ ಬಂಗಳೂರು ಡಿಸ್ಟ್ರಿಕ್ಟು ಬಂಗಳೂರು ರೇಂಜಿಗೆ ಸೇರಿದ ಪೀಣ್ಯ ಪ್ಲಾಂಟೇಷನ್ನಿನಲ್ಲಿ ಆದರಲ್ಲಿ ನಮೂದಿಸಿರುವ ಮಾರ್ಪಾಗಳು ಇದರಿಂದ ಮಂಜೂರ್ಮಾಡಲ್ಪಟ್ಟಿವೆ.

I. ಪೀಣ್ಯ ಬ್ಲಾಕ್ :—ಮೈಸೂರು ಇಂಜಿನಿಯರ್ ಇಲಾಖೆಯವರ ಉಪಯೋಗಕ್ಕೆ ಮಾತ್ರ ಬಳಪಟ್ಟ ಸುಮಾರು 30ಗಜ ಅಗಲವುಳ್ಳ ಮೈಸೂರು ವಾಟರ್ ವರ್ಕ್ಸ್ ಪೈಪ್ ಲೈನ್—ಪೀಣ್ಯ ಗ್ರಾಮದ ಸರ್ವೆ 131ನೆ ನಂಬರಿಗೆ ಪೂರ್ವ ದಿಕ್ಕಿನಲ್ಲಿ ಇರುವ ಪ್ಲಾಂಟೇಷನ್ನಿನ ನೈರುತ್ಯ ಮೂಲೆಗೆ ಉತ್ತರದಲ್ಲಿ ಸುಮಾರು ಬಂದು ಫರ್ಲಾಂಗಿನಲ್ಲಿ ಪೀಣ್ಯ ಪ್ಲಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಆಗ್ನೇಯವಾಗಿ ಸುಮಾರು 2,512 ಗಜ ದೂರ ಹೋಗಿ ಪ್ಲಾಂಟೇಷನ್ನಿಗೆ ಆಗ್ನೇಯ ಮೂಲೆಗೆ ಉತ್ತರಕ್ಕೆ ಸುಮಾರು 20 ಗಜ ದೂರದಲ್ಲಿ ಪ್ಲಾಂಟೇರ್ಷನನ್ನು ಬಿಟ್ಟು ಪೀಣ್ಯ ಗ್ರಾಮದ ಸರ್ವೆ 72ನೆ ನಂಬರನ್ನು ಪ್ರವೇಶಿಸುತ್ತದೆ.

II. ಜಾಲಹಳ್ಳಿ ಬ್ಲಾಕ್ :—ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇರ್ಷ ಇಂಜಿನಿಯರ್ ಡಿಪಾರ್ಟ್‌ಮೆಂಟಿನವರ ಹಕ್ಕಿಗೆ ಬಳಿಪಟ್ಟ ಸುಮಾರು 30 ಗಜ ಅಗಲವುಳ್ಳ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ವಾಟರ್ ವರ್ಕ್ಸ್ ಲೈನ್—ಜಾಲಹಳ್ಳಿ ಗ್ರಾಮದ ಸರ್ವೆ 5ನೆ ನಂಬರು ಈಶಾನ್ಯ ಮೂಲೆಗೆ ಪಶ್ಚಿಮವಾಗಿ ಮೊದಲನೇ ಮೂಲೆಗೆ ಪೂರ್ವ ಸುಮಾರು 150 ಗಜದಲ್ಲಿ ಪ್ಲಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಸುಮಾರು 1,819 ಗಜಗಳ ದೂರ ನೇರವಾಗಿ ಆಗ್ನೇಯಕ್ಕೆ ಹೊರಟು ಜಾಲಹಳ್ಳಿ ಪ್ಲಾಂಟೇಷನ್ನಿನ ಆಗ್ನೇಯ ಮೂಲೆಗೆ ಪಶ್ಚಿಮಕ್ಕೆ ಸುಮಾರು 1 ಫರ್ಲಾಂಗ್ ದೂರದಲ್ಲಿ ಪ್ಲಾಂಟೇಷನನ್ನು ಬಿಟ್ಟು ಜಾಲಹಳ್ಳಿ ಗ್ರಾಮದ ಸರ್ವೆ 11ನೆ ನಂಬರನ್ನು ಪ್ರವೇಶಿಸುತ್ತದೆ.

ನೋಟೀಸು, ತಾರೀಖು 14ನೆ ನವಂಬರ್ 1903ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಕಾರ್ಕಾರ್‌ಹಳ್ಳಿ ತಾಲ್ಲೂಕು ಕಬ್ಬಾಳ ಫಾರೆಸ್ಟು ಗಾರ್ಡ್ ಆಗಿದ್ದ ಶಿತಾರಾಮೈಯ್ಯನೆ 1902ನೆ ಇಸವಿ ನವಂಬರ್ ಮಾಹೆ ತಲಬು 4-12-9 ಬಟವಾಡೆ ಆಗದೆ ಸದರಿ ಮೊಬಲಗು ಕಾರ್ಕಾರ್‌ಹಳ್ಳಿ ಫಾರೆಸ್ಟು ರೇಂಜಾ ಫೀಸಿನಲ್ಲಿ ಅಮಾನತ್ತು ನಿಲ್ಲುತ್ತಾ ಬಂದಿರುತ್ತೆ. ಈ ಮೊಬಲಗು ಸದರಿ ಶಿತಾರಾಮೈಯ್ಯನೇ ಆಗಲಿ ಅಥವಾ ಈತನ ಕಡೆ ನ್ಯಾಯವಾದ ವಾರಸ್ದಾರರೇ ಆಗಲಿ ಈ ತಾರೀಖು ಲಾಗಾಯಿತು ಎರಡು ತಿಂಗಳು ಒಳಗಾಗಿ ಸದರಿ ಮೊಬಲಗು 4—12—9 ಯನ್ನು ಪಡಿಯಬೆ ತಪ್ಪಿದಲ್ಲಿ ಸರ್ಕಾರಕ್ಕೆ ಮೇಲ್ಕಂಡ ಮೊಬಲಗು ಶೇರಿಸಿಕೊಳ್ಳಲಾಗುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬಂಗಳೂರು ಡಿಸ್ಟ್ರಿಕ್ಟು.

ನೋಟಿಸ್.

1903ನೆ ಇಸವಿ ಆಗಷ್ಟು ತಿಂಗಳು 27ನೆ ತಾರೀಖಿನ IIನೆ ಭಾಗದ 467ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಪಸಾರೆ ಜೆನಿಕ ಜಮೀವಣಿ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಘೋಷಿಸಾಗಿರುವದು ಸರಿಯಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜೆನಿಕ ಜಮೀವಣಿ ಹಕ್ಕನ್ನು 1903ನೆ ಇಸವಿ ನವಂಬರು 17ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್‌ರವರ ಮತ್ತು ರೇಂಜಾಫೀಸರವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಯಲ್ಲರಿಗೂ ತಿಳಿಸಲ್ಪಟ್ಟಿದೆ.

ನೋಟೀಸು, ತಾರೀಖು 7ನೆ ನವಂಬರ್ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರಗೂರು ಸೋಮೇಶ್ವರ ದಳಿಕಡು ಡಿಪೋದಲ್ಲಿ ಕಪಿಲಾನದೀ ನೀರಿನ ಕಳೆಯಿಂದ ಹೊಡದುಕೊಂಡುಬಂದ ಚವುಬೀನಾ ಹಕ್ಕುದಾರೀ ವಿಷಯದಲ್ಲಿ 1903ನೆ ಇಸವಿ ನವಂಬರು ಮಾಹೆ 12ನೆ ತಾರೀಖು ಮೈಸೂರು ಗೆಜೆಟ್ಟಿನ IIನೆ ಭಾಗದ 544ನೆ ಪೇಜನ್ನು ನೋಡತಕ್ಕದ್ದು.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 30ನೆ ಅಕ್ಟೋಬರ್ 1903ನೆ ಇಸವಿ.

ಕೋಲಾರ ತಾಲ್ಲೂಕು ಹುತ್ತೂರು ಹೋಬಳೀಗೆ ಸೇರಿದ ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಜೋಡಿ ಗ್ರಾಮಗಳು,

1. ಜೋಡಿ ಚಾಮರಹಳ್ಳಿ.
2. ಜೋಡಿ ಕೊಟ್ಟೂರು ಬನವಾಪುರ.

ಸದರಿ ಜೋಡಿದಾರ್ರುಗಳಿಂದ ಸರ್ಕಾರಕ್ಕೆ ಬರಬೇಕಾದ ಜೋಡೀ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಚೇರಿಯಲ್ಲಿ 1903ನೆ ಇಸವಿ ಡಿಸೆಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

(ಹೆಚ್ಚಿನ ತಪಶೀಲ್ ಬಗ್ಗೆ 12ನೆ ಮುರ್ತುಂ 44ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 544—545—546ನೆ ನಂ ಬರು ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನ[illegible]

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 3ನೆ ನವಂಬರ್ 1903.

1. ಕಂದಾಯದ ಬಾಕೀದಾರರಾದ ಜೋಡಿ ಹಾಲತ್ತಿ ಗ್ರಾಮದ ಶಾಂಭಟ್ಟ ವಗೈರೇ 18 ಜನರಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸರ್ಕಾರಕ್ಕೆ ಶೇರಿಸಿಕೊಂಡ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಜೋಡಿ ಹಾಲತ್ತಿ ಗ್ರಾಮದಲ್ಲಿ 1904ನೆ ಜನವರಿ 4ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ಸದರೀ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಪೀಲ್ ವೇರಿಗೆ 245—5—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.